ಗುಬ್ಬಿ ತಾಲ್ಲೂಕು ಚಂದ್ರಶೇಖರ ಪುರದಲ್ಲಿರುವ ಪಿ.ಹೆಚ್.ಯಂನ್ನು ಪಿ. ಹೆಚ್. ಸಿ. ಆಗಿ ಪರಿವರ್ತಿಸಲಾದ ಬಗ್ಗೆ.

೧೭೧೯. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಆರೋಗ್ಯ ಮಂತ್ರ್ರಿ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕು ಚಂದ್ರಶೇಖರ ಪುರದಲ್ಲಿರುವ ಪಿ. ಹೆಚ್. ಯುನ್ನು ಪಿ ಹೆಚ್ ಸಿ ಆಗಿ ಯಾವಾಗ ಪರಿವರ್ತಿಸಲಾಯಿತು ?

ಆ) ಪಿ ಹೆಚ್ ಸಿ ಯಲ್ಲಿ ಕೆಲಸ ನಿರ್ವಹಿಸಲು ನೇಮಿಸಲಾಗಿರುವ ಸಿಬ್ಬಂದಿ ಎಷ್ಟು ?

ಇ) ಆಸ್ಪತ್ರೆಗೆ ಯಾವ ತಿಂಗಳಿಂದ ಔಷಧಿ ಸರಬರಾಜನ್ನು ನಿಲ್ಲಿಸಲಾಗಿದೆ ? ಹಾಗಿದ್ದಲ್ಲಿ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಉ) ಔಷಧಿಗಳನ್ನು ಹಂಚಲು ಸರ್ಕಾರದವರು ಟೆಂಡರ್ ಕರೆದಿದ್ದಾರೆಯೇ ? ಈ ವರ್ಷ ಯಾರಿಗೆ ಟೆಂಡರ್ ನೀಡಲಾಗಿದೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೧೯೮೫-೮೬.

ಆ) ಮಂಜೂರಾಗಿರುವ ಮತ್ತು ಕೆಲಸ ಮಾಡುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇವೆ.—

ಕ್ರ.ಸಂ.	ಹುದ್ದೆಯ ಹೆಸರು	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಕೆಲಸ ಮಾಡುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
೧	ವೈದ್ಯಾಧಿಕಾರಿಗಳು	೧	೧	—
೨	ಔಷಧಿ ಮಿಶ್ರಣಕಾರರು	೧	೧	—
೩	ಕ್ಷೇತ್ರ ಆರೋಗ್ಯ ಶಿಕ್ಷಕರು	೧	೧	—
೪	ವಾಹನ ಚಾಲಕ	೧	೧	—
೫	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	೧	—	೧
೬	ಎರಡನೇ ದರ್ಜೆ ಸಹಾಯಕರು	೧	೧	—
೭	ಹಿರಿಯ ಮಹಿಳಾ ಆರೋಗ್ಯ ಸಹಾಯಕರು	೨	೧	೧
೮	ಹಿರಿಯ ಪುರುಷ —,,—	೧	೧	—
೯	ಕಿರಿಯ ಪುರುಷ —,,—	೮	೮	—
೧೦	ಕಿರಿಯ ಮಹಿಳಾ —,,—	೯	೯	—
೧೧	ಸ್ಟಾಫ್ ನರ್ಸ್	೧	೧	—
೧೨	ಡಿ ವರ್ಗದ ನೌಕರರು	೩	೩	—

ಇ) ಔಷಧಿ ಸರಬರಾಜನ್ನು ನಿಲ್ಲಿಸಿರುವುದಿಲ್ಲ.

ಇಲ್ಲ.

ಈ) (ಇ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಉ) ೧೯೮೭–೮೮ನೇ ಸಾಲಿಗೆ ಸಂಬಂಧಪಟ್ಟಂತೆ ಟೆಂಡರ್‌ಗಳನ್ನು ಕರೆದು ಅದನ್ನು ಪೂರ್ಣಗೊಳಿಸಲಾಗಿದೆ, ಅದು ಈ ವರ್ಷದ ೩೧–೧೨–೮೮ರವರೆಗೆ ಚಾಲ್ತಿಯಲ್ಲಿರುತ್ತದೆ. ಗುತ್ತಿಗೆದಾರರ ಪಟ್ಟಿಯನ್ನು ಇದಕ್ಕೆ ಲಗತ್ತಿಸಿದೆ.

SUCCESSFUL TENDERERS UNDER R. C. I/87–88

M/S

1 ACE Chemicals
2 Bangalore Surgical Traders, Bangalore
3 Biopharma Labs, Bangalore
4 Bhatt Brothers, Bangalore
5 Balaji Drug House, Bangalore
6 Bengal Immunity and Co., Bangalore
7 Bengal Chemicals and Pharma, Madras
8 Bombay Surgical and Scientific Company, Bangalore
9 Bangalore Surgicals, Bangalore
10 Cipla Limited, Bangalore
11 Emkay Formulations, Bangalore
12 Empire Surgical Traders, Delhi
13 Fair Child Laboratories, Hyderabad
14 Fine Chemical Laboratories, Bangalore
15 Fleming (India), Banaglore
16 Glindia Limited. Bangalore
17 Hindustan Tablets, Bangalore
18 Health Line Private Limited. Bangalore
19 Hindustan Antibiotics Limited, Banglore
20 Hind Agenceies, Bangalore
21 Healwell, Bangalore
22 Indira Chemical and Pharma, Gulbara
23 Impirial Drug Corporation, Vijayawada
24 Indian Drugs and Pharma Limited, Bangalore
25 Jagath Surgical, Bangalore

26 J. L. Morison and Jones, Madras
27 Kanpha Labs, Bangalore
28 K. A. and P. L., Bangalore
29 Lavina Plastics, Bangalore
30 Leukoplast (I) Limited, Bombay
31 Mahaveer Drug House, Bangalore
32 Mercantile Distributors, Bangalore
33 Mahaveer Pharma, Bangalore
34 Mysore Pharmaceuticals, Bangalore
35 Mohan and Company, Bangalore
36 Micro Labs, Bangalore
37 Mahaveer Medical Hall, Bombay
38 Mahendra Lab. Limited, Bangalore
39 Neon Labs Limited, Bombay
40 Nirmal Chemical Industries, Hubli
41 Pooja India and Company, Banaglore
42 Premier Agencies, Vijayawada
43 Praveen Drug House, Bangalore
44 Prabhat Surgical and Cotton, Bangalore
45 Rajendra Chemical Works, Bangalore
46 Ravi Industrial Supplies, Bangalore
47 Ratna Enterprises, Bangalore
48 Sri. Satya Agencies, Bangalore
49 Rall's (I) Ltd, Bangalore
50 S. R. Latex, Bangalore
51 Steri Lab Pvt Ltd, Bangalore
52 The South India Surgical Co., Bangalore
53 Shon Products, Dharwad
54 Shilpa Enterprises, Bangalore
55 Tejpar Madicals, Bangalore
56 Tejpal and Co., Bangalore
57 United Pharma Enterprises, Hyderabad
58 Karnataka Small Industries Marketing Corporation, Bangalore

SUCCESSFUL TENDERERS UNDER R. C. II/87-88.

M/S

1 Associated Scientific and Surgical Co., Bangalore
2 Bhatt Brothers, Bangalore
3 Bangalore Surgicals, Bangalore
4 Coir Cushions Ltd., Bangalore
5 Chetan Surgicals, Bangalore
6 Drugs Sales Supplies, Bangalore
7 Delhi Hospital Supplies, Delhi
8 Hymatic Agro Equipment Ltd., New Delhi
9 Hospital Equipments Co., Bangalore
10 Indian Oxygen Ltd., Bangalore
11 Jubilee Medical Engineering Co., Bangalore
12 Kamal Scientific and Surgical Co., Bangalore
13 Karnataka Small Industries Marketing Corporation, Bangalore
14 Karnataka State Coir Development Corporation, Bangalore
15 Kiran X-ray Screens Ltd., Bombay
16 Meditronics Manufacturing Co., Bombay
17 Raj Surgicals, Bangalore
18 Shaw Trading Co., Bangalore
19 Sudarshan Trading Co., Bangalore
20 The Bangalore Surgical Co., Bangalore

ಶ್ರೀ ಜಿ. ಎಸ್. ಶಿವಸಂಜಪ್ಪ.—ಮಾನ್ಯ ಅಧ್ಯಕ್ಷರೇ, ಚಂದ್ರಶೇಖರ ಪುರದಲ್ಲಿ ಮೊದಲು ಪಿ. ಹೆಚ್. ಯು. ಇತ್ತು. ಅದನ್ನು ಪಿ. ಹೆಚ್. ಸಿ. ಆಗಿ ಮಾಡಿದರು. ಅಲ್ಲಿ ಈಗ ಕಟ್ಟಡ ಇಲ್ಲ. ಏತಕ್ಕೆ ಆ ಕಟ್ಟಡವನ್ನು ಇದುವರೆಗೂ ಅಲ್ಲಿ ಒದಗಿಸಿಲ್ಲ. ಅಲ್ಲಿಗೆ ಲೇಡಿ ಡಾಕ್ಟರನ್ನು ಕಳುಹಿಸಬೇಕಾಗಿತ್ತು, ಇದುವರೆಗೂ ಅಲ್ಲಿಗೆ ಯಾವ ಲೇಡಿ ಡಾಕ್ಟರನ್ನು ಕಳುಹಿಸಿಲ್ಲ. ನನ್ನ ೫' ಪ್ರಶ್ನೆಗೆ ಆಸ್ಪತ್ರೆಗೆ ಯಾವ ತಿಂಗಳಿಂದ ಔಷಧಿಯ ಸರಬರಾಜನ್ನು ನಿಲ್ಲಿಸಲಾಗಿದೆ ಎಂದಿದ್ದಕ್ಕೆ ಔಷಧಿ ಸರಬರಾಜನ್ನು ನಿಲ್ಲಿಸಿರುವುದಿಲ್ಲ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಹಾಗಿದ್ದರೆ ಎಲ್ಲಿಂದ ಔಷಧಿಯನ್ನು ಕಳುಹಿಸಿದ್ದೀರಿ, ಆ ಮಾಹಿತಿಯನ್ನು ದಯಮಾಡಿ ನನಗೆ ಕೊಡಿ ? ನೀವು ಟೆಂಡರನ್ನು ಓಪ್ಪಿರುವ ಡೇಟನ್ನು ಕೊಟ್ಟಿಲ್ಲ. ೮೭-೮೮ ಎಂದು ಹೇಳಿದ್ದೀರಿ. ಅದು ಈ ವರ್ಷದ ೩೧-೧೨-೮೮ ರವರೆಗೆ ಚಾಲ್ತಿಯಲ್ಲಿದೆಯೆ ಎಂದು ಕೂಡಾ ತಾವು ಹೇಳಿದ್ದೀರಿ. ತಾವು ಟೆಂಡರನ್ನು ಆಕ್ಸೆಪ್ಟ್ ಮಾಡಿರುವ ಡೇಟನ್ನು ದಯಮಾಡಿ ಕೊಡಬೇಕು. ಇದಕ್ಕಿಂತ ಈ ಹಿಂದೆ ನೀವು ಸಪ್ಲೈ ಮಾಡಿರುವುದಿಲ್ಲ ಎಂಬುದು ಇದರಿಂದ ಸ್ಪಷ್ಟ ಇನ್‌ಫರನ್ಸ್ ಇದೆ ಎಂದು ಗೊತ್ತಾಗುತ್ತದೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ ೮೭-೮೮ನೇ ಸಾಲಿನಲ್ಲಿ ನಮ್ಮ ತಾಲ್ಲೂಕಿಗೆ ಯಾವ ಆಸ್ಪತ್ರೆಗೂ ಔಷಧಿಯನ್ನು ಸಪ್ಲೈ ಮಾಡಿಲ್ಲ. ಈ ರೀತಿ ಇದ್ದರೆ ಅಲ್ಲಿನ ಡಾಕ್ಟರ್‌ಗಳು ಯಾವ ರೀತಿ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ ಎನ್ನುವುದನ್ನು ದಯಮಾಡಿ ತಿಳಿಸಬೇಕು ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಆಸ್ಪತ್ರೆಗೆ ಹಿಂದೆ ಮೂರು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಅವಕಾಶ ಇತ್ತು, ಈಗ ಅದನ್ನು ಹತ್ತು ಲಕ್ಷ ಮಾಡಿದ್ದೇವೆ, ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಿಗೆ ಒಂದು ಲಕ್ಷ ಹಿಂದೆ ಇತ್ತು, ಈಗ ಎರಡು ಲಕ್ಷ ಮಾಡಿದ್ದೇವೆ. ತಾಲ್ಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಹೆರಿಗೆ ವಿಭಾಗ ಸೇರಿ) ಹಿಂದೆ ೨೫ ಸಾವಿರ ಇತ್ತು, ಈಗ ೭೫ ಸಾವಿರ ಮಾಡಿದ್ದೇವೆ. ತಾಲ್ಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಿಂದೆ ೨೦ ಸಾವಿರ ಇತ್ತು, ಈಗ ೫೦ ಸಾವಿರ ಮಾಡಿದ್ದೇವೆ ತಾಲ್ಲೂಕು ಮಟ್ಟದಿಂದ ಕೆಳಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಿಂದೆ ೧೨ ಸಾವಿರ ಇತ್ತು, ಈಗ ೩೦ ಸಾವಿರ ಮಾಡಿದ್ದೇವೆ. ತಾಲ್ಲೂಕು ಮಟ್ಟದ ಆರೋಗ್ಯ ಘಟಕಗಳಿಗೆ ಹೆರಿಗೆ ವಿಭಾಗ ಸೇರಿ ಹಿಂದೆ ಹತ್ತು ಸಾವಿರ ಇತ್ತು. ಈಗ ಐವತ್ತು ಸಾವಿರ ಮಾಡಿದ್ದೇವೆ. ತಾಲ್ಲೂಕು ಮಟ್ಟದ ಕೆಳಗಿರುವ ಪ್ರಾಥಮಿಕ ಆರೋಗ್ಯ ಘಟಕಗಳಿಗೆ (ಹೆರಿಗೆ ವಿಭಾಗ ಸೇರಿ) ಹಿಂದೆ ಹನ್ನೆರಡು ಸಾವಿರ ಇತ್ತು, ಈಗ ೩೦ ಸಾವಿರ ಮಾಡಿದ್ದೇವೆ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹಿಂದೆ ೮ ಸಾವಿರ ಇತ್ತು, ಈಗ ೨೦ ಸಾವಿರ ಮಾಡಿದ್ದೇವೆ ಇನ್ನು ಚಂದ್ರು ಶೇಖರ ಪುರಕ್ಕೆ ಸಂಬಂಧಪಟ್ಟ ಹಾಗೆ ೮೫-೮೬ ರಲ್ಲಿ ನೇರವಾಗಿ ಖರೀದಿ ಮಾಡಿ ಒದಗಿಸಿದಕ್ಕೆ ೩೬೩೫-೩೫ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಗೆಯೇ ಸರ್ಕಾರಿ ಮಳಿಗೆಯಿಂದ ೧೯೫೯.೮೦ ರೂಪಾಯಿಗಳ ಔಷಧಿಯನ್ನು ಕೊಟ್ಟಿದ್ದೇವೆ. ಒಟ್ಟು ೨೫,೦೩೫-೨೫ ರೂಪಾಯಿಗಳ ಔಷಧಿಯನ್ನು ಕೊಟ್ಟಿದ್ದೇವೆ. ೧೯೮೬-೮೭ ರಲ್ಲಿ ನೇರವಾಗಿ ಖರೀದಿ ಮಾಡಿ ಒದಗಿಸಿದ್ದು ೩,೩೫೬-೦೪ ರೂಪಾಯಿಗಳ ಔಷಧಿ ಹಾಗೆಯೇ ಸರ್ಕಾರಿ ಮಳಿಗೆಯಿಂದ ೨೨,೭೭೮-೦೦ ರೂಪಾಯಿಗಳ ಔಷಧಿಯನ್ನು ಕೊಟ್ಟಿದ್ದೇವೆ, ಒಟ್ಟು ೨೬,೧೧೪-೦೪ ರೂಪಾಯಿಗಳ ಔಷಧಿ ಕೊಟ್ಟಿದ್ದೇವೆ. ೧೯೮೭-೮೮ ರಲ್ಲಿ ನೇರವಾಗಿ ಖರೀದಿ ಮಾಡಿ ಒದಗಿಸಿದ್ದು ೧೦,೧೪೪.೧೦ ರೂಪಾಯಿಗಳ ಔಷಧಿ ಆದರೆ ಸರ್ಕಾರಿ ಮಳಿಗೆಯಿಂದ ೮೫೭೨-೧೭ ರೂಪಾಯಿಗಳ ಔಷಧಿ ಕೊಟ್ಟಿದ್ದೇವೆ, ಹೀಗೆ ಒಟ್ಟು ೧೯,೭೨೨-೨೭ ರೂಪಾಯಿಗಳ ಔಷಧಿ ಕೊಟ್ಟಿದ್ದೇವೆ. ಔಷಧಿಗೋಸ್ಕರವಾಗಿಯೇ ಇಷ್ಟು ಹಣವನ್ನು ನಾವು ಕೊಟ್ಟಿದ್ದೇವೆ. ಆದ್ದರಿಂದ ನಾವು ತಮ್ಮ ತಾಲ್ಲೂಕಿಗೆ ಔಷಧಿಯನ್ನು ಕೊಟ್ಟಿಲ್ಲ, ಹಣವನ್ನು ಕೊಟ್ಟಿಲ್ಲ ಎಂದು ಹೇಳತಕ್ಕಂಥದ್ದು ಸತ್ಯಕ್ಕೆ ದೂರವಾಗಿರತಕ್ಕಂಥ ಮಾತು.

ಶ್ರೀ ಜಿ. ಎಸ್. ಶಿವನಂಜಪ್ಪ —ಅಧ್ಯಕ್ಷರೇ, ನೀವು ಟೆಂಡರನ್ನು ಆಕ್ಸೆಪ್ಟ್ ಮಾಡಿರುವುದು ೮೭-೮೮ಕ್ಕೆ ಎಂದು ನನ್ನ ಪ್ರಶ್ನೆ. ನಾವು ಟೆಂಡರನ್ನು ಕರೆದಿದ್ದೀರಿ, ಅದರ ಟೆಂಡರನ್ನು ಆಕ್ಸೆಪ್ಟ್ ಮಾಡಿದ್ದು ಯಾವಾಗ ? ಇಲ್ಲಿ ಪಿ ಹೆಚ್. ಯು. ಇದ್ದನ್ನನ್ನು ಪಿ ಹೆಚ್. ಇ. ಆಗಿ ಪರಿವರ್ತನೆ ಮಾಡಿದ್ದೀರಿ. ಆಲ್ಲಿ ಮಂಡಲಪಂಚಾಯಿತಿ ಪ್ರಧಾನರು ನಿಮ್ಮವರೇ ಆಗಿದ್ದಾರೆ. ಅವರು ಕೂಡಾ ಅನೇಕ ಸಾರಿ ಸರ್ಕಾರವನ್ನು ಒತ್ತಾಯಮಾಡಿದ್ದಾರೆ. ನಾವು ಜಮೀನು ಕೊಟ್ಟಿದ್ದೆವೆ. ನೀವು ಆಸ್ಪತ್ರೆ ಕಟ್ಟಡವನ್ನು ಪ್ರಾರಂಭ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಒಂದನೆಯದು. ಎರಡನೆಯದು ಆಲ್ಲಿಗೆ ಲೇಡಿ ಡಾಕ್ಟರನ್ನು ಪೋಸ್ಟ್ ಮಾಡಿ. ಮೂರನೆಯದು ಆಲ್ಲಿಗೆ ಬಾದು ಜೀಪನ್ನು ಕಳುಹಿಸಿ. ಇಷ್ಟೆಲ್ಲಾ ಆಲ್ಲಿಗೆ ಆಲಾಟ್ ಮಾಡಿಕೊಡಬೇಕೆಂದು ನಾವು ಕೇಳುತ್ತಿದ್ದರೂ ಕೂಡಾ ಇನ್ನೂ ಪೂರೈಕೆ ಆಗಿಲ್ಲ ಮತ್ತೆ ಈ ಔಷಧಿಗಳನ್ನು ಗುಬ್ಬಿ ತಾಲ್ಲೂಕಿಗೆ ಕಳುಹಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ನಾನು ಬಹಳ ಗಂಭೀರವಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಗುಬ್ಬಿ ತಾಲ್ಲೂಕಿನ ಆಸ್ಪತ್ರೆಗೆ ಒಂದು ಪೈಸೆ ಯದು ಔಷಧಿ ಕೂಡ ಬಂದಿಲ್ಲ. ನಾನು ಬಹಳ ಗಂಭೀರವಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ಏನು ವಿಚಾರ ಮಾಡಿದ್ದೀರಿ ? ಅದೇ ರೀತಿ ನಿಟ್ಟೂರು ಪಿ ಹೆಚ್. ಯು ಗೆ ಔಷಧಿಯನ್ನು ಕಳುಹಿಸಿಲ್ಲ. ನೀವು ಟೆಂಡರನ್ನು ಯಾವಾಗ ಆಕ್ಸೆಪ್ ಮಾಡಿದ್ದೀರಿ ಎಂದು ಹೇಳಿಬಿಟ್ಟರೆ ನೀವು ಯಾವಾಗ ಔಷಧಿಯನ್ನು ಕಳುಹಿಸಿದ್ದೀರಿ ಎಂದು ಗೊತ್ತಾಗುತ್ತದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಧ್ಯಕ್ಷರೇ, ಈ ತಾಲ್ಲೂಕು ಮಟ್ಟಿಗೆ ಒಂದೂ ಪೈಸೆ ಹಣ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ವಿಚಾರಣೆ ಮಾಡುತ್ತೇನೆ. ಇವರು ಇಲ್ಲವೆಂದು ಹೇಳಿದ್ದಾರೆ, ಆದು ನಿಜವಾದರೆ ಸಂಬಂಧಪಟ್ಟವರ ಮೇಲೆ ಸೂಕ್ತವಾದ ಕ್ರಮ ತೆಗೆದು ಕೊಳ್ಳುತ್ತೇನೆ. ಟೆಂಡರ್‌ಗೆ ಯಾವಾಗ ಒಪ್ಪಿಗೆ ಕೊಟ್ಟಿದ್ದೀರಿ ದು ಮಾನ್ಯ ಸದಸ್ಯರು ಕೇಳಿದ್ದಾರೆ. ಫೆಬ್ರುವರಿ ೮೮ ರಲ್ಲಿ ಟೆಂಡರ್‌ಗೆ ಒಪ್ಪಿಗೆ ಕೊಡಲಾಗಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಸಭಾಧ್ಯಕ್ಷರೇ, ೧೯೮೮ರ ಫೆಬ್ರುವರಿಯಲ್ಲಿ ಟೆಂಡರ್ ಆಕ್ಸೆಪ್ಟ್ ಆಯಿತು. ಆದಾದಮೇಲೆ ಪೇಷಿನ್ಸ್‌ಗಳನ್ನು ಸಪ್ಲೈ ಮಾಡಿದ್ದಾರೆ. ಅದಕ್ಕಿಂತ ಮುಂಚೆ

ಸಪ್ಲೈ ಮಾಡಿರಲಿಲ್ಲ, ಔಷಧಿಗಳನ್ನು ಜಾಸ್ತಿ ಮಾಡಿಕೊಂಡು ಬಂದಿದ್ದೇವೆ ಔಷಧಿಗಾಗಿ ಜಾಸ್ತಿ ಹಣವನ್ನು ಇಟ್ಟಿದ್ದೇವೆ ಎಂದೂ ಹೇಳಿದ್ದೀರಿ. ಈಗಲಾದರೂ ಸರ್ಕಾರ ಕಣ್ಣು ತೆರೆದಿದೆ ಎಂದು ಕಾಣುತ್ತದೆ. ಇದಕ್ಕಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಆದರೆ ಟೆಂಡರ್ ಅಕ್ಸೆಪ್ಟ್ ಮಾಡುವ ಮುಂಚೆ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲದೆ ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತಾ ಇತ್ತು ? ಈ ತರಹ ಅನಾಮಲೀಸ್ ಮೂಲಕ ಬರದ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಬಿಲ್ಡಿಂಗ್‌ಗಳನ್ನು ಯಾವಾಗ ಕಟ್ಟುತ್ತೀರಿ ಜೀಪ್ ಅನ್ನು ಯಾವಾಗ ಕೊಡುತ್ತೀರಿ ? ಹಾಗೆಯೇ ಲೇಡಿ ಡಾಕ್ಟರ್ ಅನ್ನು ಯಾವಾಗ ಅಪಾಯಿಂಟ್ ಮಾಡುತ್ತೀರಿ ಎಂಬುದನ್ನು ತಿಳಿಸಿದರೆ ನನಗೆ ಸಂತೋಷವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಟೆಂಡರ್ ಅನ್ನು ಮುಂದಿನ ಆರ್ಥಿಕ ವರ್ಷ ಪ್ರಾರಂಭವಾಗುವುದಕ್ಕಿಂತ ಮುಂಚೆ ಒಪ್ಪಿಕೊಳ್ಳತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತೆ ಬಿಲ್ಡಿಂಗ್ ಕಟ್ಟಿಸುವ ವಿಷಯದಲ್ಲಿ ಹೇಳಿದ್ದಾರೆ. ಆದು ಹಣ ಒದಗಿದ ಹಾಗೆ ಮಾಡಬೇಕಾಗುತ್ತದೆ. ಲೇಡಿ ಡಾಕ್ಟರ್ ಅನ್ನು ಆಲ್ಲಿಗೆ ಇನ್ನೂ ಮಂಜೂರು ಮಾಡಿಲ್ಲ, ಮಂಜೂರು ಮಾಡಿದ ಮೇಲೆ ಪೋಸ್ಟ್ ಮಾಡುತ್ತೇವೆ. ಹಾಲಿ ಆ ಹುದ್ದೆ ಖಾಲಿ ಇಲ್ಲ, ಆಲ್ಲಿಗೆ ಆ ಸ್ಥಾನವನ್ನು ಮಂಜೂರು ಮಾಡಿಲ್ಲ. ಲೇಡಿ ಮೇಡಿಕಲ್ ಆಫೀಸರ್ ಪೋಸ್ಟನ್ನು ಮಂಜೂರು ಮಾಡಬೇಕಾಗುತ್ತದೆ. ಆ ನಂತರ ಲೇಡಿ ಡಾಕ್ಟರ್ ಅನ್ನು ಪೋಸ್ಟ್ ಮಾಡುತ್ತೇವೆ.

೨೧ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ

ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಮ್ಮೇಳನದ ಬಗ್ಗೆ

೧೩೮೯. ಶ್ರೀ ರಾಜುಗೌಡ.— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ೧೯೮೬ ರಲ್ಲಿ ನಡೆದ ಸಾರ್ಕ್ ಸಮ್ಮೇಳನದ ಸಿದ್ಧತೆಗಾಗಿ ರಾಜ್ಯ ಸರ್ಕಾರವು ವೆಚ್ಚ ಮಾಡಿದ ಮೊಬಲಗೆಷ್ಟು ?

ಆ) ಈ ಸಮ್ಮೇಳನಕ್ಕಾಗಿ ಕೇಂದ್ರ ಸರ್ಕಾರವು ಒದಗಿಸಿದ ಹಣವೆಷ್ಟು ?

ಇ) ಈ ಸಮ್ಮೇಳನದಿಂದ ರಾಜ್ಯಕ್ಕೆ ದೊರೆತಿರುವ ಪ್ರತ್ಯಕ್ಷ ಹಾಗೂ ಪರೋಕ್ಷ ಸ್ಥಾನಮಾನ ವಾದರೂ ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಬೆಂಗಳೂರಿನಲ್ಲಿ ೧೯೮೬ ರಲ್ಲಿ ನಡೆದ ಸಾರ್ಕ್ ಸಮ್ಮೇಳನಕ್ಕಾಗಿ ರಾಜ್ಯ ಸರ್ಕಾರವು ೧೧೭೯. ೭೪೨ ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಆ) ೨೫೭.೫೯ ಲಕ್ಷ ರೂ.ಗಳು

ಇ) ೧) ಈ ಸಮ್ಮೇಳನದಿಂದ ಕರ್ನಾಟಕ ರಾಜ್ಯ ಹಾಗೂ ಬೆಂಗಳೂರು ನಗರ ಅಂತರ ರಾಷ್ಟ್ರೀಯ ಖ್ಯಾತಿಗಳಿಸಲು ಸಾಧ್ಯವಾಯಿತು.

೨) ಸಾರ್ಕ್ ಸಮ್ಮೇಳನದ ನಿರ್ಣಯಗಳು ಬೆಂಗಳೂರು ಸಮ್ಮೇಳನದ ನಿರ್ಣಯಗಳೆಂದೇ ಕರೆಯಲ್ಪಡುವುದರಿಂದ ಬೆಂಗಳೂರಿಗೆ ಜಾಗತೀಕ ಖ್ಯಾತಿ ದೊರೆತಿದೆ.

೩) ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ ಸಭೆ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸ ಬಹುದೆಂಬುದನ್ನು ಸಾರ್ಕ್ ಸಮ್ಮೇಳನವು ಸಾಬೀತು ಪಡಿಸಿದೆ.

ಶ್ರೀ ಜಿ. ರಾಜೂಗೌಡ.— ಸಾರ್ಕ್ ಸಮ್ಮೇಳನಕ್ಕೆ ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದರಲ್ಲಿ ೨ ಕೋಟಿ ೫೦ ಲಕ್ಷ ರೂಪಾಯಿಗಳು ಜಮಾ ಬಂದಿದೆಯೆಂದು ಹೇಳಿದ್ದೀರಿ. ಉಳಿದ ೯ ಕೋಟಿ ರೂಪಾಯಿಗಳ ಮಂಜೂರಾತಿ ಬೇಡಿಕೆಯನ್ನು ಕೇಂದ್ರ ಸರ್ಕಾರಕ್ಕೆ ಏನಾದರೂ ಸಲ್ಲಿಸಿದ್ದೀರಾ ? ಸಾರ್ಕ್ ಸಮ್ಮೇಳನದಲ್ಲಿ ಸಭಾಂಗಣಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ನಮ್ಮ ದೇಶದಿಂದ ಮತ್ತು ಹೊರದೇಶಗಳಿಂದ ಬರತಕ್ಕಂಥ ರಾಜರುಗಳು ಮತ್ತು ಪ್ರಧಾನ ಮಂತ್ರಿಗಳಿಗೆ